Reg. No. | | | | | | | | |

**BBAKAL 132**

# I Semester B.B.A. Degree Examination, April 2021
## (Choice Based Credit System) (2020-21 Batch Onwards) (New)
## KANNADA
## Kannada Language – I

Time : 3 Hours | Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) 'ಕುಲಮುಂ ತಕ್ಕೂರ್ಮೆಯಂ ಮಾಸದೇ' ಎಂಬ ಪದ್ಯಭಾಗದಲ್ಲಿ ಭೀಷ್ಮನ ವ್ಯಕ್ತಿತ್ವ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

**ಅಥವಾ**

'ಜೀತದಾಳಿನ ಗಾಥೆ' ಕವನ ಶೋಷಣೆಯ ನಾನಾ ಮುಖಗಳನ್ನು ಹೇಗೆ ಅನಾವರಣಗೊಳಿಸುತ್ತದೆ ? ವಿವರಿಸಿರಿ.

2) ಮುಗ್ಧಜೀವಗಳು ಜಾಗತಿಕ ದುರಂತಗಳಿಗೆ ಬಲಿಯಾಗುವ ಪ್ರಸಂಗವನ್ನು 'ಒಂದು ಅಫ್ಘಾನ್ ಹುಡುಗಿಯ ಕಥೆ' ಹೇಗೆ ಪ್ರಸ್ತುತಪಡಿಸುತ್ತದೆ ? ವಿವರಿಸಿರಿ.

**ಅಥವಾ**

ಅವೈಜ್ಞಾನಿಕವಾದ ಆಧುನಿಕ ತಂತ್ರಜ್ಞಾನಗಳು ಭೂಮಿಯ ಒಡಲನ್ನು ಬರಿದುಮಾಡುವ ಹುನ್ನಾರವನ್ನು 'ಪಾತಾಳ ಗಂಗಾ – ಬರಿದಾಗಲಿರುವ ಅಂತರಗಂಗೆ' ಲೇಖನ ಹೇಗೆ ನಿರೂಪಿಸುತ್ತದೆ ? ವಿವರಿಸಿರಿ.

3) ಪತಿಯಿಂದ ಪರಿತ್ಯಕ್ತಳಾದ ಸಂದರ್ಭದಲ್ಲಿನ ಯಶೋಧರೆಯ ಮಾನಸಿಕ ತುಮುಲ ನಾಟಕದಲ್ಲಿ ಹೇಗೆ ಅನಾವರಣಗೊಂಡಿದೆ ? ವಿವರಿಸಿರಿ.

**ಅಥವಾ**

ನಾಟಕದಲ್ಲಿ ಬುದ್ಧನ ಪಾತ್ರ ಚಿತ್ರಿತವಾಗಿರುವ ಬಗೆಯನ್ನು ವಿವೇಚಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಬೆಳಗಿನ ಬೆರಗು ಬೇಂದ್ರೆಯವರ ಕವನದಲ್ಲಿ ಹೇಗೆ ಅನಾವರಣಗೊಂಡಿದೆ ?

**ಅಥವಾ**

ರುಕ್ಮಿಣಿ ಕೃಷ್ಣನನ್ನು ನಿಂದಿಸಿದ ಪ್ರಸಂಗ ಜನಪದ ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ?

2) 'ಏಕೆ ಓದಬೇಕು ?' ಪ್ರಬಂಧದ ಆಶಯವೇನು ? ವಿವರಿಸಿರಿ.

**ಅಥವಾ**

ಶೈಕ್ಷಣಿಕ ಪ್ರವಾಸದ ಸಂದರ್ಭದಲ್ಲಿ ಊಟಿಯಲ್ಲಾದ ಸಮಸ್ಯೆಯನ್ನು ಲೇಖಕಿ ಬಗೆಹರಿಸಿಕೊಂಡ ಬಗೆ ಹೇಗೆ ?

3) ಅಂಬಾಪಾಲಿಯ ಪಾತ್ರವನ್ನು ಪರಿಚಯಿಸಿರಿ.

**ಅಥವಾ**

ಬುದ್ಧ ಯಶೋಧರೆಯನ್ನು ಭೇಟಿಯಾಗುವ ಸಂದರ್ಭದ ಸ್ವಾರಸ್ಯವೇನು ?

III. ಈ ಕೆಳಗಿನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥ ವಿವರಿಸಿರಿ. **(1×5=5)**

1) ತಾಯ ಗರ್ಭದ ಶಿಶು ತಾಯ ಕುರುಹನರಿಯದು
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು
ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ ರಾಮನಾಥ

2) ಬಿಚ್ಚಬಹುದು;
ಉಟ್ಟ ಸೀರೆಯನ್ನು
ಕಟ್ಟಿದ ಪೇಟವನ್ನು
ಬಿಚ್ಚಿ ತೋರಿಸಬಹುದೇ
ತೋರಿಸಿ ಒಪ್ಪಿಸಬಹುದೇ ?
ನಮ್ಮೆಲ್ಲ ಭೂತ ವರ್ತಮಾನದ
ಸತ್ಯವನ್ನು ?

IV. ಯಾವುದಾದರೂ **ಎರಡು** ಸಾಲುಗಳಿಗೆ ಸಂದರ್ಭ ಸ್ವಾರಸ್ಯ ವಿವರಿಸಿರಿ : **(2×4=8)**

1) ಬೇಡುವೊಡೆ ನೀವೆನ್ನಯ್ಯನಂ ಬೇಡಿರೇ
2) ಬಾವುಲ ಬಾಳುವೆಯಂತೆನ್ನ ಮನವು
3) ನಿನ್ನ ಮಡಿಲಲ್ಲಿ ಮಲಗಿ ಮತ್ತೆ ಕೇಳುತ್ತೇನೆ ಈ ಎಲ್ಲ ಶಿಕ್ಷೆ ಯಾಕಾಗಿ ?
4) ರಾಜ್ಯಪಟ್ಟ ನನಗಿಲ್ಲ ದ್ರವ್ಯದ ಅನುಕೂಲಾ

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×4=8)

1) ಪಂಪ
2) ಮೂಡ್ನಾಕೂಡು ಚಿನ್ನಸ್ವಾಮಿ
3) ಜನಪದ ಕಾವ್ಯ
4) ವಚನ ಸಾಹಿತ್ಯ.

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×4=8)

1) ಚಂದ್ರಶೇಖರ ಆಲೂರು
2) ಕೆ. ಟಿ. ಗಟ್ಟಿ
3) ನೀರಿನ ಉಳಿತಾಯ
4) ಉಪನ್ಯಾಸಕಿಯ ಮೊದಲ ತರಗತಿಯ ಅನುಭವ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ : (12×1=12)

1) ಪಂಪನ ಆಶ್ರಯದಾತ ಯಾರು ?
2) ದಾಸಿಮಯ್ಯನ ವಚನಗಳ ಅಂಕಿತ ಯಾವುದು ?
3) ದ. ರಾ. ಬೇಂದ್ರೆಯವರ ಕಾವ್ಯನಾಮವೇನು ?
4) ಎ. ಕೆ. ರಾಮಾನುಜನ್ ಎಲ್ಲಿ ಹುಟ್ಟಿದರು ?
5) 'ಒಲಿದಂತೆ ಹಾಡುವೆ' ಎಂಬುದು ಯಾರ ಅಂಕಣ ಬರಹ ?
6) ಕೆ. ಟಿ. ಗಟ್ಟಿಯವರ ಹುಟ್ಟೂರು ಯಾವುದು ?
7) 'ಕಾಶ್ಮೀರದಲ್ಲೊಂದು ಸಂಜೆ' ಎಂಬುದು ಯಾರ ಕಾದಂಬರಿ ?
8) 'ರೆಫರೆನ್ಸ್ ಏಷ್ಯಾ ' ಪುಸ್ತಕದಲ್ಲಿ ಸೇರ್ಪಡೆಗೊಂಡ ಮಹಿಳಾಲೇಖಕಿಯ ಹೆಸರೇನು ?
9) 'ಕನ್ನಡದ ಆಸ್ತಿ' ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಯಾರು ?
10) ಸಿದ್ಧಾರ್ಥ ಎಲ್ಲಿ ಹುಟ್ಟಿ ಬೆಳೆದನು ?
11) ಬುದ್ಧನ ಶಿಷ್ಯೆಯ ಹೆಸರೇನು ?
12) ಮಾನಂದ ಯಾರು ?